ನಡೆಯುತ್ತಿರುವ ಎಲ್ಲ ಸಂಸ್ಥೆಗಳಿಗೆ ಸಂಬಂಧಿಸಿದ ಕಾನೂನನ್ನು ತಿದ್ದುಪಡಿ ಮಾಡಬೇಕೆನ್ನುವುದು ಈಗಾಗಲೇ ನಮ್ಮ ಸರ್ಕಾರದ ಗಮನದಲ್ಲಿದೆ, ಅದು ಪರಿಶೀಲನೆ ಹಂತದಲ್ಲಿದೆ. Adoption centre ಬೆಂಗಳೂರಿನಲ್ಲಿ ಮಾತ್ರ ಇದೆ, ಉತ್ತರ ಕರ್ನಾಟಕ ಅಥವಾ ಹೈದರಾಬಾದ್ ಕರ್ನಾಟಕದ ಭಾಗದಲ್ಲಿ ಇಲ್ಲ ಎನ್ನುವ ಮಾತನ್ನು ಹೇಳಿದರು. ಅಲ್ಲಿಯೂ ಇದೆ. ಪ್ರತಿ ಜಿಲ್ಲೆಗಳಲ್ಲಿಯೂ ಜಿಲ್ಲಾವಾರು ಒಂದು ಸಮಿತಿಯನ್ನು ಮಾಡಿದ್ದು, ಅಲ್ಲಿನ ಅಧಿಕಾರಿಗಳು ದತ್ತು ಪಡೆದಂಥ ಮಕ್ಕಳಿಗೆ ಎಲ್ಲ ರೀತಿಯ ಕಾಳಜಿ ವಹಿಸುವಂಥ ಕೆಲಸವನ್ನು ಮಾಡುತ್ತಿದ್ದಾರೆ. ಮಕ್ಕಳಿಗೆ ತಂದೆ–ತಾಯಿಗಳು ಸಿಗುವಂತಾಗಬೇಕು ಎಂದು ಹೇಳಿದರು. ಅದರ ಬಗ್ಗೆ ನಮ್ಮ ಇಲಾಖೆ ಬಹಳಷ್ಟು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದು, ಪ್ರತಿ ಜಿಲ್ಲೆಗೆ 5 ಸದಸ್ಯರನ್ನು ಮಾಡಿದ್ದು, ಒಂದು ಒಳ್ಳೆಯ ಕಾರ್ಯಕ್ರಮವನ್ನು ಮಾಡುತ್ತಿದೆ. ದತ್ತು ಪಡೆದಂಥ ಮಕ್ಕಳಿಗೆ ಯಾವುದೇ ರೀತಿ ತೊಂದರೆಯಾಗದ ರೀತಿಯಲ್ಲಿ ನಮ್ಮ ಇಲಾಖೆ ಕೆಲಸ ಮಾಡುತ್ತಿದೆ ಎನ್ನುವ ಮಾತನ್ನು ಹೇಳುತ್ತೇನೆ.

ಶ್ರೀ ನೆ.ಲ. ನರೇಂದ್ರಬಾಬು: Adoption Coordinating Agency ರಾಜ್ಯದಲ್ಲಿ ಬೆಂಗಳೂರು ಬಿಟ್ಟು ಹೊರಗಡೆಯೂ ಇದೆ ಎಂದು ಹೇಳಿದಿರಿ. ಎಲ್ಲಿದೆ ಎನ್ನುವುದನ್ನು ದಯವಿಟ್ಟು ಹೇಳಬೇಕು. ನನಗೆ ಬಂದಿರುವ ಮಾಹಿತಿ ಪ್ರಕಾರ ಬೆಂಗಳೂರಿನಲ್ಲಿ ಒಂದು ಮಾತ್ರ ಇದೆ. ಆದರೆ, ತಾವು ಬೆಂಗಳೂರು ಬಿಟ್ಟು ಹೊರಗಡೆಯೂ ಇದೆ ಎಂದು ಹೇಳುತ್ತಿದ್ದೀರಿ, ಆದ್ದರಿಂದ ಎಲ್ಲಿದೆ ಎನ್ನುವುದನ್ನು ಹೇಳಬೇಕು.

ಶ್ರೀ ಶಿವರಾಜ್ ತಂಗಡಗಿ: Adoption centre ಬೆಂಗಳೂರಿನಲ್ಲಿ ಮಾತ್ರ ಒಂದು ಇದೆ. ಆದರೆ ನಾನು ಹೇಳಿದಂಥಾದ್ದು ಏನೆಂದರೆ, ದತ್ತು ಮಕ್ಕಳನ್ನು ರಕ್ಷಣೆ ಮಾಡತಕ್ಕಂಥ ದೃಷ್ಟಿಯಿಂದ ಒಂದೊಂದು ಜಿಲ್ಲೆಗೆ ಒಂದೊಂದು ಸಮಿತಿಯನ್ನು ಮಾಡಲಾಗಿದೆ. ಈ ರೀತಿ ಸಮಿತಿಯನ್ನು ಮಾಡಿ, ಆ ಮಕ್ಕಳಿಗೆ ರಕ್ಷಣೆ ಕೊಡುವಂಥ ಕೆಲಸವನ್ನು ನಮ್ಮ ಇಲಾಖೆ ಮಾಡುತ್ತಿದೆ.

ಬೀದರ್ ಜಿಲ್ಲೆಯಲ್ಲಿ ಅಂಗನವಾಡಿ ಕೇಂದ್ರಗಳ ನಿರ್ಮಾಣದ ಬಗ್ಗೆ

1215 **ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ** ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಇರುವ ಒಟ್ಟು ಅಂಗನವಾಡಿ ಕೇಂದ್ರಗಳೆಷ್ಟು;

ಆ) ಈ ಪೈಕಿ ಎಷ್ಟು ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡ ಇದೆ; (ವಿಧಾನಸಭಾ ಕ್ಷೇತ್ರವಾರು ವಿವರ ಒದಗಿಸುವುದು)

ಇ) ಎಷ್ಟು ಅಂಗನವಾಡಿ ಕೇಂದ್ರಗಳು ಬಾಡಿಗೆ ಕಟ್ಟಡದಲ್ಲಿ ಕಾರ್ಯ ನಿರ್ವಹಿಸುತ್ತಿವೆ; (ವಿಧಾನಸಭಾ ಕ್ಷೇತ್ರವಾರು ವಿವರ ಒದಗಿಸುವುದು);

ಈ) 2008–09 ಮತ್ತು 2009–10ನೇ ಸಾಲಿನಲ್ಲಿ ಅಂಗನವಾಡಿ ಕೇಂದ್ರಗಳ ನಿರ್ಮಾಣಕ್ಕಾಗಿ ಎಷ್ಟು ಅನುದಾನವನ್ನು ಒದಗಿಸಲಾಗಿದೆ; ಈ ಪೈಕಿ ಇಲ್ಲಿಯವರೆವಿಗೆ ವೆಚ್ಚ ಮಾಡಿರುವ ಹಣವೆಷ್ಟು; (ಜಿಲ್ಲಾವಾರು ಅಂಕಿ ಅಂಶಗಳನ್ನು ಒದಗಿಸುವುದು)

ಉ) ಈ ಪೈಕಿ ಪ್ರತಿ ಜಿಲ್ಲೆಗೆ ಒದಗಿಸಲಾದ ಅನುದಾನವೆಷ್ಟು;

ಊ) ಸದರಿ ಅನುದಾನದಲ್ಲಿ ಬೀದರ್ ಜಿಲ್ಲೆಯಲ್ಲಿ ವಿಶೇಷವಾಗಿ ಭಾಲ್ಕಿ ವಿಧಾನಸಭಾ ಕ್ಷೇತ್ರದಲ್ಲಿ ಎಷ್ಟು ಅಂಗನವಾಡಿ ಕೇಂದ್ರಗಳನ್ನು ಹೊಸದಾಗಿ ನಿರ್ಮಿಸಲಾಗಿದೆ? (ವಿಧಾನ ಸಭಾ ಕ್ಷೇತ್ರವಾರು ವಿವರ ಒದಗಿಸುವುದು)

ಶ್ರೀ ಪಿ.ಎಂ. ನರೇಂದ್ರಸ್ವಾಮಿ (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವರು)

ಅ) ಬೀದರ್ ಜಿಲ್ಲೆಯಲ್ಲಿ 1580 ಅಂಗನವಾಡಿ ಕೇಂದ್ರಗಳಿವೆ. 2009–10ನೇ ಸಾಲಿನಲ್ಲಿ 283 ಕೇಂದ್ರಗಳು ಮಂಜೂರಾಗಿರುತ್ತವೆ.

ಆ) ಬೀದರ್ ಜಿಲ್ಲೆಯಲ್ಲಿ 875 ಅಂಗನವಾಡಿ ಕೇಂದ್ರಗಳಿಗೆ ಸ್ವಂತ ಕಟ್ಟಡವಿದ್ದು ವಿಧಾನಸಭಾ ಕ್ಷೇತ್ರವಾರು ವಿವರ ಕೆಳಕಂಡಂತಿದೆ:

ಬೀದರ್	ಬೀದರ್ ದಕ್ಷಿಣ	ಭಾಲ್ಕಿ	ಬಸವ ಕಲ್ಯಾಣ	ಹುಮ್ನಾಬಾದ್	ಔರಾದ್	ಒಟ್ಟು
92	134	152	176	158	163	875

ಇ) ಬೀದರ್ ಜಿಲ್ಲೆಯಲ್ಲಿ 514 ಅಂಗನವಾಡಿ ಕೇಂದ್ರಗಳು ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದ್ದು ವಿಧಾನಸಭಾ ಕ್ಷೇತ್ರವಾರು ವಿವರ ಕೆಳಕಂಡಂತಿದೆ:

ಬೀದರ್	ಬೀದರ್ ದಕ್ಷಿಣ	ಭಾಲ್ಕಿ	ಬಸವ ಕಲ್ಯಾಣ	ಹುಮ್ನಾಬಾದ್	ಔರಾದ್	ಒಟ್ಟು
91	105	75	101	63	79	514

ಈ) 2008–09ನೇ ಸಾಲಿನಲ್ಲಿ NABARDನ RIDF-13 ರಡಿಯಲ್ಲಿ 1198.80 ಲಕ್ಷಗಳು, ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ 2998.66 ಹಾಗೂ ಇಲಾಖಾ ಅನುದಾನದಡಿಯಲ್ಲಿ 449.86 ಲಕ್ಷ ಅನುದಾನವನ್ನು ಒದಗಿಸಲಾಗಿದೆ. ಬಿಡುಗಡೆ ಮತ್ತು ವೆಚ್ಚದ ಜಿಲ್ಲಾವಾರು ಅಂಕಿ ಅಂಶಗಳ ವಿವರವನ್ನು ಹಾಗೂ 2009–10ರಲ್ಲಿ ನಿಗದಿಪಡಿಸಿದ ಅನುದಾನದ ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಉ) ವಿವರವನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಊ) ಭಾಲ್ಕಿ ವಿಧನಸಭಾ ಕ್ಷೇತ್ರದಲ್ಲಿ 18 ಅಂಗನವಾಡಿ ಕೇಂದ್ರಗಳನ್ನು ಹೊಸದಾಗಿ ನಿರ್ಮಿಸಲಾಗುತ್ತಿದ್ದು ಗ್ರಾಮಗಳ ವಿವರ ಕೆಳಕಂಡಂತಿದೆ:

ಅ) ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ

1. ದಾದೋಡಿಥಾಂಡಾ 2. ಬೋಳೆಗಾಂವ 3. ಕುರುಬ ಖೇಳ್ಗಿ 4. ವಾಂಜರಖೇಡ ಥಾಂಡಾ 5. ಲಖನಗಾಂವ (ಸಿ) 6. ಲಖನಗಾಂವ (ಬಿ) 7. ಮಳಚಾಪುರ 8. ಕೊಂಗಳಿ (ಬಿ) 9. ಲಾಧಾ 10. ಸಾಯೆಗಾಂವ 11. ಭಾಳೂರು ಥಾಂಡಾ 12. ಕೇರೂರು 13. ಕೊಂಗಳಿ, 14. ಕಣಜಿ (ಸಿ) 15. ವಾಂಜರಖೇಡ 16. ಮದಕಟ್ಟಿ

ಆ) ತಾಲ್ಲೂಕು ಪಂಚಾಯತ್ ಕ್ರಿಯಾ ಯೋಜನೆಯಡಿಯಲ್ಲಿ

17. ಲಖನಗಾಂವ ಮತ್ತು 18. ಸೈದಾಪೂರವಾಡಿ

ಅನುಬಂಧ

ಕ್ರ. ಸಂ.	ಜಿಲ್ಲೆಯ ಹೆಸರು	2008–09 (ರೂ. ಲಕ್ಷಗಳಲ್ಲಿ)						2009–10		
		RIDF-13		SDP		ಇಲಾಖೆ		RIDF-15	SDP	ಇಲಾಖೆ
		ಬಿಡುಗಡೆ	ಖರ್ಚು	ಬಿಡುಗಡೆ	ಖರ್ಚು	ಬಿಡುಗಡೆ	ಖರ್ಚು	ನಿಗದಿಪಡಿಸಲಾದ ಅನುದಾನ		
1	2	3	4	5	6	7	8	9	10	11
1	ಬಾಗಲಕೋಟೆ	38.76	38.76	86.25	86.25	15.20	14.95	90.00	105.00	15.20
2	ಬೆಂಗಳೂರು (ಗ್ರಾ)	21.69	5.14	9.93	2.96	10.13	10.13	57.60	10.80	10.13
3	ಬೆಂಗಳೂರು (ನ)	32.67	32.67	69.51	0.00	20.27	20.27	43.20	14.40	20.00
4	ಬಳ್ಳಾರಿ	43.48	43.48	6.62	6.62	8.51	8.51	105.00	255.00	8.50
5	ಬೆಳಗಾಂ	81.85	81.85	224.25	224.25	20.27	17.37	150.00	150.00	20.27
6	ಬೀದರ್	19.70	18.63	110.40	110.40	3.92	0.00	75.00	240.00	5.00
7	ಬಿಜಾಪುರ	46.60	46.60	224.25	223.31	10.13	10.13	75.00	240.00	5.00
8	ಚಾಮರಾಜನಗರ	34.40	34.40	148.35	148.35	15.20	14.58	60.00	116.25	15.00

1	2	3	4	5	6	7	8	9	10	11
9	ಚಿಕ್ಕಮಗಳೂರು	43.76	43.76	86.25	86.25	10.13	10.13	105.00	52.50	10.00
10	ಚಿತ್ರದುರ್ಗ	9.93	9.93	34.50	34.50	20.27	20.22	86.40	158.40	20.00
11	ಚಿಕ್ಕಬಳ್ಳಾಪುರ	26.25	26.25	99.30	99.30	10.13	8.43	86.40	126.00	10.00
12	ದಾವಣಗೆರೆ	43.87	43.87	115.85	39.00	20.27	20.27	86.40	144.00	20.00
13	ದಕ್ಷಿಣ ಕನ್ನಡ	34.89	33.77	0.00	0.00	20.27	20.27	75.00	0.00	20.00
14	ಧಾರವಾಡ	57.04	35.50	41.40	39.56	10.13	10.13	75.00	60.00	10.00
15	ಗದಗ	17.77	17.77	41.40	41.40	12.00	12.00	75.00	60.00	15.20
16	ಗುಲ್ಬರ್ಗಾ	69.20	69.20	355.35	355.35	20.27	20.27	150.00	630.00	20.27
17	ಹಾಸನ	134.07	109.09	82.75	82.75	16.21	0.80	115.20	93.60	16.00
18	ಹಾವೇರಿ	38.11	38.11	103.50	35.00	20.27	20.27	105.00	135.00	20.00
19	ಮಡಿಕೇರಿ	25.08	25.08	0.00	0.00	20.27	20.27	45.00	0.00	20.00
20	ಕೋಲಾರ	26.25	26.25	66.20	66.20	5.00	5.00	72.00	86.40	11.00

1	2	3	4	5	6	7	8	9	10	11
21	ಕೊಪ್ಪಳ	20.30	20.20	99.30	99.30	12.67	12.67	60.00	187.50	13.00
22	ಮಂಡ್ಯ	47.71	74.71	172.50	172.50	20.27	20.27	100.80	151.20	20.00
23	ಮೈಸೂರು	37.20	37.07	115.85	115.85	25.33	25.33	100.80	187.20	25.00
24	ರಾಮನಗರ	37.88	10.59	132.40	132.40	10.13	10.13	57.60	108.00	10.00
25	ರಾಯಚೂರು	21.20	21.20	220.80	220.80	10.13	10.13	75.00	288.75	10.00
26	ಶಿವಮೊಗ್ಗ	50.66	50.66	34.50	34.50	10.13	10.13	105.00	48.75	10.13
27	ತುಮಕೂರು	66.71	66.71	248.25	248.25	12.00	12.00	144.00	302.40	20.00
28	ಉಡುಪಿ	23.07	23.07	0.00	0.00	9.68	9.56	45.00	0.00	15.00
29	ಕಾರವಾರ	48.80	41.58	69.00	68.84	50.67	50.67	165.00	90.00	50.00
	ಒಟ್ಟು	**1198.80**	**1098.90**	**2998.66**	**2773.90**	**449.86**	**424.89**	**2585.40**	**3999.40**	**469.70**

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ (ಶ್ರೀ ಈಶ್ವರ್ ಭೀಮಣ್ಣ ಖಂಡ್ರೆಯವರ ಪರವಾಗಿ): ಉತ್ತರವನ್ನು ಕೊಟ್ಟಿದ್ದಾರೆ. ಇದರಲ್ಲಿ ಭಾಲ್ಕಿ ಮತ ಕ್ಷೇತ್ರದಲ್ಲಿ 18 ಅಂಗನವಾಡಿ ಕೇಂದ್ರಗಳನ್ನು ಈ ವರ್ಷ ನೀಡಲಾಗಿದೆ ಎಂದು ಹೇಳಿದ್ದಾರೆ. ಅದಕ್ಕೆ ಎಷ್ಟು ಅನುದಾನವನ್ನು ಬಿಡುಗಡೆ ಮಾಡಲಾಗಿದೆ ಎನ್ನುವುದನ್ನು ಸಚಿವರು ದಯಮಾಡಿ ತಿಳಿಸಬೇಕು. ಎರಡನೆಯದಾಗಿ, ಕರ್ನಾಟಕ ರಾಜ್ಯದಲ್ಲಿ, ಹುಬ್ಬಳ್ಳಿ, ಗದಗ್, ಶಿವಮೊಗ್ಗ, ಮಂಗಳೂರು ಹೀಗೆ ಉತ್ತರ ಕರ್ನಾಟಕದ ಅನೇಕ ಜಿಲ್ಲೆಗಳಲ್ಲಿ ಅವಧಿ ಮೀರಿದಂಥ ಆಹಾರ ಧಾನ್ಯಗಳನ್ನು ಜುಲೈ ತಿಂಗಳಲ್ಲಿ ಲಕ್ಷಾಂತರ ಜನ ಮಕ್ಕಳಿಗೆ, ಗರ್ಭಿಣಿಯರಿಗೆ ವಿತರಣೆ ಮಾಡಿರತಕ್ಕಂಥಾದ್ದು ಸರ್ಕಾರದ ಗಮನಕ್ಕೆ ಬಂದಿದೆಯೇ? ಇದರ ಬಗ್ಗೆ ಆಯಾ ಜಿಲ್ಲೆಗಳಲ್ಲಿ ದೊಡ್ಡ ಹೋರಾಟವನ್ನು ಕೂಡ ಜನರು ಮಾಡಿದ್ದಾರೆ. ಅದರಲ್ಲಿ ಭಾಗಿಯಾಗಿರತಕ್ಕಂಥ C.D.P. ಗಳು ಮತ್ತು ತಪ್ಪಿತಸ್ಥ ಅಧಿಕಾರಿಗಳ ಮೇಲೆ ಹಾಗೂ ಅವಧಿ ಮೀರಿದಂಥ ಆಹಾರ ಧಾನ್ಯಗಳನ್ನು supply ಮಾಡಿರತಕ್ಕಂಥ ಕಂಪನಿಯ ವಿರುದ್ಧವಾಗಿ ಸರ್ಕಾರ ಯಾವ ಕ್ರಮಗಳನ್ನು ತೆಗೆದುಕೊಂಡಿದೆ? ಅವಧಿ ಮೀರಿದಂಥ ಆಹಾರ ಧಾನ್ಯಗಳನ್ನು supply ಮಾಡಿರತಕ್ಕಂಥ ಕಂಪನಿಯ ಲೈಸೆನ್ಸ್ ಅನ್ನು ಏಕೆ ಸರ್ಕಾರ ಇಲ್ಲಿಯವರೆಗೆ ರದ್ದು ಮಾಡಿಲ್ಲ? ಅಲ್ಲಿನ C.D.Pಗಳನ್ನು suspend ಮಾಡತಕ್ಕಂಥ ಕಾನೂನಿನ ಕ್ರಮವನ್ನು ಏಕೆ ಜರುಗಿಸಿಲ್ಲ ಎನ್ನುವುದಕ್ಕೆ ಸ್ಪಷ್ಟವಾದಂಥ ಉತ್ತರವನ್ನು ಸಚಿವರು ಕೊಡಬೇಕು ಎಂದು ತಮ್ಮ ಮೂಲಕ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಶಿವರಾಜ್ ತಂಗಡಗಿ: ಬೀದರ್ ಜಿಲ್ಲೆಯಲ್ಲಿ 1,580 ಅಂಗನವಾಡಿ ಕೇಂದ್ರಗಳನ್ನು ಈಗಾಗಲೇ ಕೊಟ್ಟಿದ್ದೇವೆ. ಸ್ವಂತ ಕಟ್ಟಡದಲ್ಲಿ 875 ಮತ್ತು ಬಾಡಿಗೆ ಕಟ್ಟಡದಲ್ಲಿ 514 ಅಂಗನವಾಡಿಗಳು ನಡೆಯುತ್ತಿವೆ. ಉಳಿದಂಥವು ಪಂಚಾಯಿತಿ ಕಟ್ಟಡ ಮತ್ತು ಸಮುದಾಯ ಭವನದಲ್ಲಿ ನಡೆಯುತ್ತಿವೆ. 305 ಕೋಟಿ ರೂ.ಗಳಷ್ಟು ಹಣ ಈಗಾಗಲೇ ಖರ್ಚಾಗಿದೆ. ಮಾನ್ಯ ಸದಸ್ಯರು ಇನ್ನೂ ಒಂದು ಪ್ರಶ್ನೆಯನ್ನು ಕೇಳಿದರು.

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ: ನಾನು ಕೇಳಿದ ಪ್ರಶ್ನೆಯೇ ಬೇರೆ, ಅವರು ಹೇಳುತ್ತಿರುವ ಉತ್ತರವೇ ಬೇರೆ. ಅಂಗನವಾಡಿ ಕೇಂದ್ರಗಳಿಗೆ ಸಂಬಂಧಿಸಿದಂತೆ ಕೊಟ್ಟಿರುವ ಉತ್ತರವನ್ನು ನಾನು ನೋಡಿದ್ದೇನೆ. ಬೀದರ್ ಜಿಲ್ಲೆಗೆ ಸಂಬಂಧಿಸಿದಂತೆ ಏನು ಉತ್ತರವನ್ನು ಕೊಟ್ಟಿದ್ದೀರಿ ಅದನ್ನೆಲ್ಲಾ ನಾನು ಓದಿದ್ದೇನೆ. ಆದರೆ ಈಗ ನಾನು ಕೇಳುತ್ತಿರುವುದೇನೆಂದರೆ, ಭಾಲ್ಕಿ ವಿಧಾನಸಭಾ

ಕ್ಷೇತ್ರಕ್ಕೆ ತಾವು ಮಂಜೂರು ಮಾಡಿರುವ 18 ಅಂಗನವಾಡಿಗಳಿಗೆ ಎಷ್ಟು ಹಣ ಬಿಡುಗಡೆ ಮಾಡಿದ್ದೀರಿ, ಒಂದೊಂದು ಅಂಗನವಾಡಿ ಕೇಂದ್ರಕ್ಕೆ ಇಷ್ಟು ಹಣ ಎನ್ನುವಂತೆ 18 ಅಂಗನವಾಡಿ ಕೇಂದ್ರಗಳಿಗೆ ಎಷ್ಟು ಹಣವನ್ನು ನೀವು ಬಿಡುಗಡೆ ಮಾಡಿದ್ದೀರಿ ಎನ್ನುವುದು ನನ್ನ ಮೊದಲನೆಯ ಪ್ರಶ್ನೆ. ಎರಡನೆ ಪ್ರಶ್ನೆ, ಉತ್ತರ ಕರ್ನಾಟಕದ...

ಅಧ್ಯಕ್ಷರು: ಪಾಟೀಲರೆ, ನೀವು ಎರಡನೇ ಪ್ರಶ್ನೆಯನ್ನು ಕೇಳಿದ್ದೀರಲ್ಲ, ಮೂಲ ಪ್ರಶ್ನೆಯಲ್ಲಿ ಆ ಸಬ್ಜೆಕ್ಟೇ ಇಲ್ಲ.

ಶ್ರೀ ಎನ್.ವೈ. ರುದ್ರೇಶ್‌ಗೌಡ: ಅತಿ ಮುಖ್ಯವಾದಂಥ ವಿಷಯವದು.

ಅಧ್ಯಕ್ಷರು: ರುದ್ರೇಶ್‌ಗೌಡರೇ ನೀವು ಕುಳಿತುಕೊಳ್ಳಿ, ನಿಮ್ಮನ್ನು ಕರೆದಿಲ್ಲ, ಪ್ರಶ್ನೆ ಅವರದ್ದಿದೆ.

ಶ್ರೀ ಎ.ಎಸ್. ಪಾಟೀಲ್ ನಡಹಳ್ಳಿ: ಆದರೆ ನಾನು ಕೇಳುತ್ತಿರತಕ್ಕಂಥಾದ್ದು, ಆ ಇಲಾಖೆಯ ಸಚಿವರಿಗೇ ಸಂಬಂಧಪಟ್ಟಿರತಕ್ಕಂಥಾದ್ದಾಗಿದೆ.

ಅಧ್ಯಕ್ಷರು: ಇದು ಪ್ರಶ್ನೋತ್ತರ ವೇಳೆ. ಅವರ ಹತ್ತಿರ ಮಾಹಿತಿ ಇದ್ದರೆ ಕೊಡಲಿ. ಆದರೆ ನೀವು ಕಳಪೆ ಆಹಾರದ ಬಗ್ಗೆ ಹೇಳಿದಿರಲ್ಲ, ಅದು ನಿಮ್ಮ ಮೂಲ ಪ್ರಶ್ನೆಯಲ್ಲಿ ಇಲ್ಲ.

ಶ್ರೀ ಎ.ಎಸ್. ಪಾಟೀಲ್ (ನಡಹಳ್ಳಿ): ನಾನು ಹೇಳುತ್ತಿರುವುದೆಲ್ಲ ಪತ್ರಿಕೆಗಳ ಮುಖಪುಟಗಳಲ್ಲಿ ಬಂದಿದೆ.

ಅಧ್ಯಕ್ಷರು: ಬಿಡಿ. ಅದನ್ನು ಬೇರೆ ರೂಪದಲ್ಲಿ ನೋಟೀಸ್ ಕೊಟ್ಟು ಕೇಳಿ. ಕಟ್ಟಡದ ಬಗ್ಗೆ ಕೇಳಿ, ಅವರು ಮಾಹಿತಿಯನ್ನು ಕೊಡಲಿ, ಕೊಡುತ್ತಾರೆ. ಆ ಕಳಪೆ ಆಹಾರದ ಬಗ್ಗೆ ನೀವು ಕೇಳಿದರೆ ಮಾಹಿತಿ ಇಲ್ಲದೇ ಅವರು ಉತ್ತರ ಕೊಡುವುದಕ್ಕಾಗುತ್ತದೆಯೇ? (ಗೊಂದಲ) ಪಾಟೀಲರೆ, ಅದಕ್ಕೆ ನಾನು ಬಹಳ hesitate ಮಾಡುವುದು. ನೀವು ಬೇಕಾದರೆ specific ಆಗಿ ಪ್ರಶ್ನೆ ಕೇಳಿ.

ಶ್ರೀ ಶಿವರಾಜ್ ಎಸ್. ತಂಗಡಗಿ: ಮಾನ್ಯ ಅಧ್ಯಕ್ಷರೆ, ಒಂದು buildingಗೆ 3 ಲಕ್ಷದ 45 ಸಾವಿರ ರೂಪಾಯಿಗಳನ್ನು ಕೊಟ್ಟಿದ್ದೇವೆ. ಒಟ್ಟು 18 ಕಟ್ಟಡಗಳಿಗೆ 72 ಲಕ್ಷದ 10 ಸಾವಿರ ರೂಪಾಯಿಗಳನ್ನು ಕೊಟ್ಟಿದೆ. ಆಹಾರ supply ಮಾಡುವಂಥ agency ಬಗ್ಗೆ ತಾವೇಕೆ ಕ್ರಮ ತೆಗೆದುಕೊಳ್ಳಲಿಲ್ಲವೆಂದು 2ನೇ ಪ್ರಶ್ನೆಯನ್ನು ಮಾನ್ಯ ಸದಸ್ಯರು ಕೇಳಿದರು. ಆದರೆ, ಇದು ಆಹಾರ ಇಲಾಖೆಗೆ ಬರುತ್ತದೆ.

(ಗೊಂದಲ)

ಅಧ್ಯಕ್ಷರು: Please ಪಾಟೀಲ್, ನಡಹಳ್ಳಿಯವರೆ, ಅಂಗನವಾಡಿ ಕಟ್ಟಡದ ಬಗ್ಗೆ ಬೇಕಾದರೆ ಪ್ರಶ್ನೆ ಕೇಳಿ. ಕಳಪೆ ಆಹಾರದ ಬಗ್ಗೆ ಅವರಿಗೆ ಮಾಹಿತಿ ಇಲ್ಲದೇ ಅವರು ಹೇಗೆ ಉತ್ತರ ಕೊಡುವುದಕ್ಕಾಗುತ್ತದೆ? ಆ ಸದಸ್ಯರು ಮೊದಲು ಕೇಳಿದ ಪ್ರಶ್ನೆಯಲ್ಲಿ ಅದು ಇರಲಿಲ್ಲ. ಈಗ ಈ ರೀತಿ ಇದಕ್ಕಿದ್ದ ಹಾಗೆ ಕೇಳಿದರೆ ನಾನು ಅವಕಾಶ ಕೊಡುವುದಕ್ಕಾಗುವುದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ: ಈಗ ಪ್ರಶ್ನೆಗೆ ಸಂಬಂಧಪಟ್ಟ ಸಚಿವರೂ ಕೂಡ ಇಲ್ಲ. ಹಾಗಾದಾಗ ಈ ಉಪ ಪ್ರಶ್ನೆಗೆ ಉತ್ತರ ಕೊಡುವುದು ಕಷ್ಟವಾಗುತ್ತದೆ. ಆದರೆ ನನ್ನ ಒಂದು ಸಲಹೆ ಏನೆಂದರೆ, ಮಾನ್ಯ ಸದಸ್ಯರು, ಅವಧಿ ಮೀರಿದಂಥ ಆಹಾರ ಧಾನ್ಯಗಳನ್ನು ಹೊರ ರಾಜ್ಯದವರು ಕೊಡುತ್ತಿದ್ದಾರೆ. ಆದರ ಮೇಲೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ ಎಂದು ಕೇಳುತ್ತಿದ್ದಾರೆ. ನಿಮಗೆ ಉತ್ತರ ಗೊತ್ತಿದ್ದರೆ ಹೇಳಿ. ಇಲ್ಲದಿದ್ದರೆ ಆ ಸಲಹೆಯನ್ನು ಪರಿಶೀಲನೆ ಮಾಡಿ ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತೇವೆ ಎಂದಾದರೂ ಹೇಳಿ.

ಅಧ್ಯಕ್ಷರು: ವಿಚಾರ ಮಾಡುತ್ತೇನೆಂದು ಹೇಳಿ. ಸಾಕು.

ಶ್ರೀ ಡಿ.ಎನ್. ಜೀವರಾಜ್: ಪ್ರಶ್ನೆ ಕೇಳುವವರು ಬೇರೆ, ಉತ್ತರ ಹೇಳುವವರೂ ಸಹ ಬೇರೆಯವರಾಗಿರುವುದರಿಂದ ಅದೇ ತಾಪತ್ರಯ ವಾಗಿರುವುದು. ಪ್ರಶ್ನೆ ಹಾಕಿದ್ದವರು ಈಶ್ವರ ಖಂಡ್ರೆಯವರಾದರೂ ಅದನ್ನು ಕೇಳುವವರು ಈಶ್ವರ ಖಂಡ್ರೆಯವರಲ್ಲ. ಇಲ್ಲಿ ಪ್ರಶ್ನೆ ಕೇಳುವವರೇ ಬೇರೆ, ಈಶ್ವರ ಖಂಡ್ರೆಯವರಾಗಿದ್ದರೆ ಅವರು particular ಪ್ರಶ್ನೆಯನ್ನು ಕೇಳುತ್ತಿದ್ದರು. (ಗೊಂದಲ) ಆ ತರಹದ ಪ್ರಶ್ನೆಗೆ ಉತ್ತರ ಕೊಡುವುದು ಕಷ್ಟವಾಗುತ್ತದೆ.

ಶ್ರೀ ಶಿವರಾಜ್ ಎಸ್. ತಂಗಡಗಿ: ನನ್ನ ಹಿರಿಯ ಸದಸ್ಯರು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದಾರೆ. ಆ ರೀತಿ ನಮ್ಮ ಇಲಾಖೆಯಲ್ಲಿ ಯಾವುದೇ ರೀತಿಯ ತೊಂದರೆ ಇದೆ ಎನ್ನುವುದಾದರೆ ಮತ್ತು ಆ ರೀತಿ ಅವಧಿ ಮೀರಿದ ಆಹಾರವನ್ನು ನಮ್ಮ ಇಲಾಖೆಯಿಂದ ತೆಗೆದುಕೊಂಡಿದ್ದರೆ ಅದನ್ನು, ಸಂಬಂಧಪಟ್ಟವರು ಹೇಳಿದ ಸಲಹೆಯನ್ನು ಪರಿಶೀಲನೆ ಮಾಡಿ ಮುಂದಿನ ಕ್ರಮವನ್ನು ತೆಗೆದುಕೊಳ್ಳುತ್ತೇನೆ.

ರಾಜ್ಯದ ಜಿಲ್ಲೆಗಳಿಗೆ ಸೀಮೆ ಎಣ್ಣೆ ವಿತರಣೆ ಬಗ್ಗೆ

1188 ಶ್ರೀ ಅಪ್ಪಾಜಿ ಚನ್ನಬಸವರಾಜ್ ಶಂಕರರಾವ್ ನಾಡಗೌಡ (ಮುದ್ದೇಬಿಹಾಳ) ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?